ಕರ್ನಾಟಕ ಸರ್ಕಾರ

ಸಂಖ್ಯೆ: ಟಿಟಿಇ/30/ಇಎಫ್ಎಸ್/2017-18

ನಿರ್ದೇಶಕರ ಕಛೇರಿ,
ತಾಂತ್ರಿಕ ಶಿಕ್ಷಣ ಇಲಾಖೆ.
ಅರಮನೆ ರಸ್ತೆ, ಬೆಂಗಳೂರು,
ದಿನಾಂಕ:11-01-2018.

**ಸುತ್ತೋಲೆ**

ವಿಷಯ:-ತಾಂತ್ರಿಕ ಪರೀಕ್ಷಾ ಮಂಡಳಿ ವ್ಯಾಪ್ತಿಯಲ್ಲಿ ಬರುವ ಸರ್ಕಾರಿ/ಅನುದಾನಿತ/ಖಾಸಗಿ ಪಾಲಿಟೆಕ್ನಿಕ್ ಮತ್ತು ಗಣಿ ಶಾಲೆಗಳು 2017 ರ ನವೆಂಬರ್ /ಡಿಸೆಂಬರ್ ಸೆಮಿಸ್ಟರ್ ಪರೀಕ್ಷೆಗೆ ಸರಬರಾಜು ಮಾಡಿರುವ ಬ್ಲಾಂಕ್ ಫ್ರೀ ಪ್ರಿಂಟೆಡ್ ಮುಖ್ಯ ಉತ್ತರ ಪತ್ರಿಕೆಗಳನ್ನು ಪರಿಶೀಲಿಸಿ ಮಾಹಿತಿ ನೀಡುವ ಬಗ್ಗೆ

ಉಲ್ಲೇಖ:-1)ಇಂಪ್ಯಾಕ್ಟ್ ಪಾಲಿಟೆಕ್ನಿಕ್ ಬೆಂಗಳೂರು, ಇವರ ಪತ್ರ ಸಂಖ್ಯೆ: ಇಂಪ್ಯಾಕ್ಟ್ ಪಿಟಿ/330/594/ ಎಕ್ಸಾಮ್.ನವೆಂಬರ್-2017 ದಿನಾಂಕ:11.12.2017.

2) ಡಿ. ಬನುಮಯ್ಯ ಪಾಲಿಟೆಕ್ನಿಕ್, ಮೈಸೂರು ರವರ ಪತ್ರ ಸಂಖ್ಯೆ:ಡಿಡಿಬಿಪಿ/ಪ.ವಿ./2017-18/460 ದಿ:07.12.2017.

3) ನಳಂದ ಫೌಂಡೇಷನ್ ಪಾಲಿಟೆಕ್ನಿಕ್, ಹುಬ್ಬಳ್ಳಿ ರವರ ಪತ್ರ ಸಂಖ್ಯೆ: ಎನ್ಎಫ್‌ಪಿ/ಟಿಟಿಇ ಎಕ್ಸಾಮ್/2017-18 ದಿ:03.12.2017.

4) ರಾಮನ್ ಪಾಲಿಟೆಕ್ನಿಕ್ ಬೆಂಗಳೂರು, ಇವರ ಪತ್ರ ಸಂಖ್ಯೆ:ಆರ್‌ಪಿ/307/2017 ದಿನಾಂಕ:14.12.2017.

********

ಉಲ್ಲೇಖ (1) ರಿಂದ (4) ರವರಗಿನ ಪತ್ರಗಳಲ್ಲಿ 2017 ರ ನವೆಂಬರ್/ಡಿಸೆಂಬರ್ ಸೆಮಿಸ್ಟರ್ ಪರೀಕ್ಷೆಗೆ ಬೇಡಿಕೆಗನುಗುಣವಾಗಿ ಕಳುಹಿಸಿರುವ "ಎಫ್" ಸರಣಿಯ ಬ್ಲಾಂಕ್ ಫ್ರೀ- ಪ್ರಿಂಟೆಡ್ ಮುಖ್ಯ ಉತ್ತರ ಪತ್ರಿಕೆಗಳಲ್ಲಿ ಹಲವಾರು ದೋಷಗಳು ಕಂಡು ಬಂದಿದ್ದು, "ಎಫ್" ಸರಣಿಯ ಬ್ಲಾಂಕ್ ಫ್ರೀ- ಪ್ರಿಂಟೆಡ್ ಮುಖ್ಯ ಉತ್ತರ ಪತ್ರಿಕೆಗಳನ್ನು ತಾಂತ್ರಿಕ ಪರೀಕ್ಷಾ ಮಂಡಳಿಗೆ ಹಿಂತಿರುಗಿಸಿರುತ್ತಾರೆ. ಪ್ರಯುಕ್ತ, 2017 ರ ನವೆಂಬರ್/ಡಿಸೆಂಬರ್ ಸೆಮಿಸ್ಟರ್ ಪರೀಕ್ಷೆಗೆ ಬೇಡಿಕೆಗನುಗುಣವಾಗಿ ಎಲ್ಲಾ ಸರ್ಕಾರಿ/ಅನುದಾನಿತ/ಖಾಸಗಿ ಪಾಲಿಟೆಕ್ನಿಕ್ ಮತ್ತು ಗಣಿ ಶಾಲೆಗಳಿಗೆ ಈಗಾಗಲೇ ಕಳುಹಿಸಲಾಗಿರುವ "ಎಫ್" ಸರಣಿಯ ಬ್ಲಾಂಕ್ ಫ್ರೀ- ಪ್ರಿಂಟೆಡ್ ಮುಖ್ಯ ಉತ್ತರ ಪತ್ರಿಕೆಗಳನ್ನು ಕೂಲಂಕಷವಾಗಿ ಪರಿಶೀಲಿಸಿ, "ಹರಿದು ಹೋಗಿದ್ದರೇ, ಹಾಳಾಗಿದ್ದರೇ, ಕ್ರಮಸಂಖ್ಯೆ ತಪ್ಪಾಗಿ ಮುದ್ರಣ ಹೊಂದಿದ್ದರೇ, ಒಂದೇ ಸಂಖ್ಯೆಯಲ್ಲಿ ಎರಡು ಉತ್ತರ ಪತ್ರಿಕೆಗಳು ಮುದ್ರಣ ಹೊಂದಿದ್ದರೇ, ಉಪಯೋಗಿಸಲು ಸಾಧ್ಯವಾಗದಿದ್ದರೇ ಮತ್ತು ಲೋಪದೋಷಗಳಿಂದ ಕೂಡಿದ್ದರೇ ಅಂತಹ ಬ್ಲಾಂಕ್ ಫ್ರೀ- ಪ್ರಿಂಟೆಡ್ ಮುಖ್ಯ ಉತ್ತರ ಪತ್ರಿಕೆಗಳ ಕ್ರಮಸಂಖ್ಯೆಯನ್ನು ನಮೂದಿಸಿದ ಮಾಹಿತಿಯನ್ನು ದಿನಾಂಕ:19.01.2018 ರೊಳಗಾಗಿ ಇ-ಮೇಲ್ ಮುಖಾಂತರ **dtebteefs@gmail.com** ಹಾಗೂ ಒಂದು ಪ್ರತಿಯನ್ನು ಅಂಚೆ ಮೂಲಕ ಬ್ಲಾಂಕ್ ಫ್ರೀ- ಪ್ರಿಂಟೆಡ್ ಮುಖ್ಯ ಉತ್ತರ ಪತ್ರಿಕೆಗಳೊಂದಿಗೆ ಲಗತ್ತಿಸಿ ಈ ಕಛೇರಿಗೆ ಕಳುಹಿಸಲು ಸೂಚಿಸಲಾಗಿದೆ. **"ಒಂದು ವೇಳೆ ಪರಿಶೀಲಿಸಿ ಮಾಹಿತಿ ನೀಡದೇ ಮುಂದಿನ ದಿನಗಳಲ್ಲಿ ಮಾಹಿತಿ ನೀಡಿದಲ್ಲಿ ಪರಿಗಣಿಸಲಾಗುವುದಿಲ್ಲ ಹಾಗೂ ಪ್ರಾಂಶುಪಾಲರು ನೇರ ಹೊಣೆಗಾರರಾಗಿರುತ್ತಾರೆ"** ಎಂಬ ಅಂಶವನ್ನು ಗಮನಕ್ಕೆ ತರಲಾಗಿದೆ.

ಕಾರ್ಯದರ್ಶಿ
ತಾಂತ್ರಿಕ ಪರೀಕ್ಷಾ ಮಂಡಳಿ, ಬೆಂಗಳೂರು

**ಇವರಿಗೆ,**

ಎಲ್ಲಾ ಸರ್ಕಾರಿ/ಅನುದಾನಿತ/ಖಾಸಗಿ ಪಾಲಿಟೆಕ್ನಿಕ್ ಮತ್ತು ಗಣಿ ಶಾಲೆಗಳ ಪ್ರಾಂಶುಪಾಲರಿಗೆ ಸೂಕ್ತ ಕ್ರಮಕ್ಕಾಗಿ.

**ಪ್ರತಿ;-ಮಾಹಿತಿಗಾಗಿ**

1. ಉಪ ನಿರ್ದೇಶಕರು/ ಸಹಾಯಕ ನಿರ್ದೇಶಕರು/ ಹಿರಿಯ ತಾಂತ್ರಿಕ ಸಹಾಯಕರು/ ರಿಜಿಸ್ಟ್ರಾರ್ [ಪರೀಕ್ಷೆ]
2. ಇ- ಆಡಳಿತ ವಿಭಾಗಕ್ಕೆ ಇಲಾಖಾ ಅಂತರ್ಜಾಲದಲ್ಲಿ ಪ್ರಕಟಿಸುವ ಸಲುವಾಗಿ.
3. ಕಛೇರಿ ಪ್ರತಿ.